Reg. No. | | | | | | | | | |

# BBAKALN 201

**ಎರಡನೇ ಸೆಮಿಸ್ಟರ್ ಬಿ.ಬಿ.ಎ. ಪದವಿ ಪರೀಕ್ಷೆ, ಸೆಪ್ಟಂಬರ್ 2022**
**(2021 – 22 Batch Onwards) (NEP-2020)**
**ಕನ್ನಡ**
**ಕನ್ನಡ ಭಾಷಾ ಪತ್ರಿಕೆ - ೧ (AECC)**

ಸಮಯ : 2 ಗಂಟೆಗಳು | ಗರಿಷ್ಠಾಂಕಗಳು : 60

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸುವುದು. **(3×8=24)**

1) ಭೀಷ್ಮನ ವ್ಯಕ್ತಿತ್ವವನ್ನು 'ಕುಲಮುಂ ತಕ್ಕುರ್ಮೆಯುಂ ಮಾಸದೇ ?' ಕಾವ್ಯಭಾಗದ ಹಿನ್ನೆಲೆಯೊಂದಿಗೆ ವಿವರಿಸಿ.

**ಅಥವಾ**

ರುಕ್ಮಿಣಿ ಗರ್ವಭಂಗ ಆದ ಪ್ರಸಂಗವನ್ನು ಜನಪದರ ಕಲ್ಪನೆಯೊಂದಿಗೆ ವಿವರಿಸಿ.

2) ಮಿತ್ರ–ಮಾರ್ಗದರ್ಶಕ–ದಾರ್ಶನಿಕನಾಗಲು ಪುಸ್ತಕಗಳಿಂದ ಮಾತ್ರ ಸಾಧ್ಯ ಎಂಬುದನ್ನು 'ಏಕೆ ಓದಬೇಕು ?' ಲೇಖನದ ಮೂಲಕ ನಿರೂಪಿಸಿ.

**ಅಥವಾ**

ಅಫ್ಘನ್ನಿನ ಹುಡುಗಿ ಫರಾಳ ಯಶೋಗಾಥೆಯನ್ನು ವಿವರಿಸಿ.

3) ಸಿದ್ಧಾರ್ಥ ಬುದ್ಧನಾದ ಮೇಲೆ ಯಶೋಧರೆಯನ್ನು ಭೇಟಿಯಾಗುವ ಸನ್ನಿವೇಶವನ್ನು ನಾಟಕದ ಹಿನ್ನೆಲೆಯೊಂದಿಗೆ ವಿವರಿಸಿ.

**ಅಥವಾ**

ಬುದ್ಧ ಮತ್ತು ಯಶೋಧರೆಯ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(3×5=15)**

1) ಬಸವಣ್ಣನ ವಚನಗಳಲ್ಲಿ ಪ್ರಕಟಗೊಂಡ ಭಕ್ತಿಯ ಸ್ವರೂಪವನ್ನು ವಿವರಿಸಿ.

**ಅಥವಾ**

ವ್ಯವಸ್ಥೆಯೊಳಗಿನ ಅಂತಸ್ತು, ಅಧಿಕಾರಗಳೆಲ್ಲವೂ ಬಲವಂತನನ್ನು ಬಲಹೀನಗೊಳಿಸುವ ರೀತಿಯನ್ನು 'ಜೀತದಾಳಿನ ಗಾಥೆ' ಕವಿತೆಯ ಹಿನ್ನೆಲೆಯೊಂದಿಗೆ ವಿವರಿಸಿ.

2) ಕಠಿಣ ಪರಿಸ್ಥಿತಿಗಳು ಮನುಷ್ಯನನ್ನು ಸಾಹಸಿಯನ್ನಾಗಿಸುತ್ತವೆ ಎಂಬುದನ್ನು 'ಒಂದು ಅಫ್ಘನ್ ಹುಡುಗಿಯ ಕಥೆ' ಹೇಗೆ ನಿರೂಪಿಸುತ್ತದೆ ? ವಿವರಿಸಿ.

**ಅಥವಾ**

ಶಿಕ್ಷಕ ವೃತ್ತಿಯ ಸ್ವಾರಸ್ಯಕರ ಸಂಗತಿಗಳನ್ನು 'ಮೇಷ್ಟ್ರು ಕಂಡ ಅವಾಂತರಗಳು' ಪ್ರಬಂಧದ ಹಿನ್ನೆಲೆಯೊಂದಿಗೆ ವಿವರಿಸಿ.

3) ಪತಿಯಿಂದ ಪರಿತ್ಯಕ್ತಳಾದ ಯಶೋಧರೆಯ ಅಂತರಾಳವು ನಾಟಕದಲ್ಲಿ ಹೇಗೆ ಅನಾವರಣಗೊಂಡಿದೆ ? ವಿವರಿಸಿ.

**ಅಥವಾ**

ಪ್ರೇಮದೊಲವು, ಮುಕ್ತಿಯ ಹಂಬಲದ ನಡುವೆ ಹೊಯ್ದಾಡುವ ಯಶೋಧರೆಯ ಪಾತ್ರವನ್ನು ವಿಶ್ಲೇಷಿಸಿ.

III. ಕೆಳಗಿನ **ಒಂದು** ಪದ್ಯದ ಸಂದರ್ಭ ಸೂಚಿಸಿ ಅರ್ಥ ಸ್ವಾರಸ್ಯವನ್ನು ಬರೆಯಿರಿ. **(1×5=5)**

ನಿನ್ನ ನೇಗಿಲುಗಳ ಮುರಿದಷ್ಟೂ
ನನ್ನ ಪಕ್ಕೆಲುಬುಗಳು
ಗಟ್ಟಿಯಾಗುತ್ತದೆ.
ಮೇಟಿ ಹಿಡಿದು ಹಿಡಿದು
ಅಂಗೈಯಿಂದ ರಕ್ತಬಿಂದುಗಳು ಬಿದ್ದು
ಗೊಬ್ಬರವಾಗಿ, ಬೆಳೆದದ್ದೆಲ್ಲಾ
ವರವಾಗಿ, ಫಸಲಾಗಿ ನೀನು
ಹುಲುಸಾದೆ.

**ಅಥವಾ**

ನಿಮ್ಮೆಲ್ಲರ ದೃಢತೆ
ಕಣ್ಣ ಬೆಳಕಾಗಿ ಬಂದು
ಈ ಮನದ ಮಲ್ಲಿಗೆಗೆ
ವಜ್ರಲೇಪವ ಬಳಿದು
ಉಳಿಸಬೇಕು.

IV. ಕೆಳಗಿನ **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(2×4=8)**

1) ಬೇಡುವೊಡೆ ನೀವೆನ್ನಯ್ಯನಂ ಬೇಡಿರೇ.

2) ಕುಲವೊಂದೆ ತನ್ನ ತಾನರಿದವನಿಗೆ.

3) ಅವರಿವರ ಕಾಡಿನಲ್ಲಿ ದಾರಿ ತಪ್ಪಿತು.

4) ಸೊಂಡಿಲಿನ ಮೊನೆಯಾದರೂ ಸಾಕು ನಿನ್ನ ಕೊನೆಗೆ.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ. **(8×1=8)**

1) ಪಂಪನ ಕಾಲ ಯಾವುದು ?

2) 'ಭಕ್ತಿ ಭಂಡಾರಿ' ಎಂದು ಯಾರನ್ನು ಕರೆಯುತ್ತಾರೆ ?

3) 'ಅಂಬಿಕಾತನಯದತ್ತ' – ಇದು ಯಾರ ಕಾವ್ಯನಾಮ ?

4) ಎ. ಕೆ. ರಾಮಾನುಜನ್ ಅವರ ಮೊದಲ ಕವನ ಸಂಕಲನ ಯಾವುದು ?

5) 'ಒಲಿದಂತೆ ಹಾಡುವೆ'– ಈ ಕೃತಿಯ ಕರ್ತೃ ಯಾರು ?

6) 'ಅವನು ಶಾಪಗ್ರಸ್ಥ ಗಂಧರ್ವ' – ಇದು ಯಾರು ಬರೆದ ಕಾದಂಬರಿ ?

7) ಮಾಸ್ತಿಯವರ ಹುಟ್ಟೂರು ಯಾವುದು ?

8) ಸಿದ್ಧಾರ್ಥನ ತಂದೆಯ ಹೆಸರೇನು ?

---